ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	300
ಸದಸ್ಯರ ಹೆಸರು	:	ಡಾ॥ ಚಂದ್ರ ಶೇಖರ ಬಿ ಪಾಟೀಲ್ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	16-07-2019
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ರಾಜ್ಯವ್ಯಾಪಿ ಹಲವು ಶಾಲೆಗಳಲ್ಲಿ ಶಿಕ್ಷಕರಿಗೆ ವೇತನ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ;	ಬಂದಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಕೇಂದ್ರ ಸರ್ಕಾರ ಪ್ರಾಯೋಜಿತ ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಗಳಡಿ ನೇಮಕಗೊಂಡ ಶಿಕ್ಷಕರಿಗೆ ಕೆಲವು ಮಾಹೆಗಳ ವೇತನ ಪಾವತಿಯಲ್ಲಿ ವಿಳಂಬವಾಗಿರುವುದು ಗಮನಕ್ಕೆ ಬಂದಿರುತ್ತದೆ. ಈ ಯೋಜನೆಗಳು ಕೇಂದ್ರ ಪ್ರಾಯೋಜಿತ ಯೋಜನೆಗಳಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಪಾಲುದಾರಿಕೆ ಅನುದಾನ ಆಧರಿಸಿ ರಾಜ್ಯಸರ್ಕಾರದಿಂದ ಅನುದಾನ ಬಿಡುಗಡೆಮಾಡುತ್ತಿರುವುದರಿಂದ ಹಾಗೂ ರಾಜ್ಯದಲ್ಲಿ ಹೊಸದಾಗಿ ಜಾರಿಗೆ ತಂದಿರುವ ಖಜಾನೆ-2 ತಂತ್ರಾಂಶದ ಅನುಷ್ಠಾನದಲ್ಲಿ ಕಾಣಿಸಿದ ತಾಂತ್ರಿಕ/ಆಡಳಿತಾತ್ಮಕ ಸಮಸ್ಯೆಗಳಿಂದಾಗಿ ಸಹ ಆಗಾಗ್ಗೆ ವಿಳಂಬದ ಪ್ರಕರಣಗಳು ವರದಿಯಾಗಿವೆ. ಶಿಕ್ಷಕರ ವೇತನವನ್ನು ಸಕಾಲದಲ್ಲಿ ಪಾವತಿಸುವಂತೆ ಅಧೀನ ಕಚೇರಿಗಳಿಗೆ ಕಾಲಕಾಲಕ್ಕೆ ಸುತ್ತೋಲೆ ಹೊರಡಿಸಿ, ಸೂಕ್ತ ನಿರ್ದೇಶನ ನೀಡಲಾಗಿದೆ. ಜೊತೆಗೆ ಆರ್ಥಿಕ ಇಲಾಖೆಯೊಡನೆ ಸಮನ್ವಯ ಸಾಧಿಸಿ ಅಡೆತಡೆಗಳನ್ನು ನಿವಾರಣೆ ಮಾಡಲಾಗಿದೆ.
(ಆ) ಶಿಕ್ಷಕರ ವೇತನ ಸೆಳೆಯಲು ಇರುವ ಲೆಕ್ಕ ಶೀರ್ಷಿಕೆಗಳು ಹಲವಾರು ಇದ್ದು, ಇದರಿಂದ ಸಕಾಲಕ್ಕೆ ವೇತನ ಬಿಡುಗಡೆಗೊಳಿಸುವಲ್ಲಿ ಮತ್ತು ಹಂಚಿಕೆ ಮಾಡುವಲ್ಲಿ ಗೊಂದಲಗಳು ಉಂಟಾಗುತ್ತಿವೆ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯಡಿ ಕೇಂದ್ರ ಸರ್ಕಾರ ಪ್ರಾಯೋಜಿತ ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹಾಗೂ ಇನ್ನಿತರ ರಾಜ್ಯ ವಲಯದ ಯೋಜನೆಗಳಡಿಯಲ್ಲಿ ಶಿಕ್ಷಕರು ನೇಮಕವಾಗಿದ್ದು, ಆಯಾ ಯೋಜನೆಗೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಡಿಯಲ್ಲಿಯೇ ವೇತನ ಪಾವತಿಗೆ ಅನುದಾನ ಹಂಚಿಕೆ ಮಾಡಲಾಗುತ್ತಿದೆ. ಆಯವ್ಯಯದಲ್ಲಿ ತಾಲ್ಲೂಕುವಾರು ಅನುದಾನ ಹಂಚಿಕೆಯಾದ ನಂತರ ಕೆಲವೊಮ್ಮೆ

	ಶಿಕ್ಷಕರ ವರ್ಗಾವಣೆ, ಹೊಸ ಶಿಕ್ಷಕರ ನೇಮಕಾತಿ ಕಾರಣಗಳಿಂದಾ ಕೆಲವು ತಾಲ್ಲೂಕುಗಳಲ್ಲಿ ವೇತನ ಪಾವತಿಗೆ ಅನುದಾನ ಕೊರತೆಯಾಗುತ್ತಿದ್ದು, ಆಯವ್ಯಯದಲ್ಲಿ ಲಭ್ಯವಿರುವ ಅನುದಾನದ ಅಂಕಿ-ಅಂಶಗಳನ್ನು ಮಾರ್ಪಡಿಸಲು, ಆರ್ಥಿಕ ಇಲಾಖೆಯ ಸಮನ್ವಯದೊಂದಿಗೆ ಈ ಸಮಸ್ಯೆಗಳನ್ನು ಪರಿಹರಿಸಲು ಕ್ರಮವಹಿಸಲಾಗುತ್ತಿದೆ.
(ಇ) ಶಿಕ್ಷಕರ ವೇತನ ಸೆಳೆಯಲು ಇರುವ ಹಲವು ಲೆಕ್ಕ ಶೀರ್ಷಿಕೆಗಳನ್ನು ವಿಲೀನ ಮಾಡಿ ಒಂದೆ ಲೆಕ್ಕ ಶೀರ್ಷಿಕೆಯಲ್ಲಿ ವೇತನ ಸೆಳೆಯಲು ಇರುವ ತೊಂದರೆಗಳೇನು? (ಸಂಪೂರ್ಣ ವಿವರ ನೀಡುವುದು)	ಈಗಾಗಲೇ ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಸಮಿತಿಗಳನ್ನು ವಿಲೀನಗೊಳಿಸಿ, ಸಮಗ್ರ ಶಿಕ್ಷಣ ಕರ್ನಾಟಕ ಸಮಿತಿ ರಚಿಸಿದ್ದು, ಈ ಯೋಜನೆಯಡಿ ಶಿಕ್ಷಕರ ವೇತನ ಸೆಳೆಯಲು ಇರುವ ಹಲವು ಲೆಕ್ಕ ಶೀರ್ಷಿಕೆಗಳನ್ನು ಒಗ್ಗೂಡಿಸುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಸಂಖ್ಯೆ: ಇಪಿ 56 ವೈವೈಕೆ 2019

(ಎಸ್.ಆರ್. ಶ್ರೀನಿವಾಸ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

173	Ranebennur	1750	1749	**3499**	28	57	85	1778	1806	**3584**
174	Savanur	988	984	**1972**	14	43	57	1002	1027	**2029**
175	Shiggaon	1085	1236	**2321**	24	14	38	1109	1250	**2359**
Haveri		**9435**	**9752**	**19187**	**232**	**450**	**682**	**9667**	**10202**	**19869**
176	Gangavathi	2517	2662	**5179**	74	127	201	2591	2789	**5380**
177	Koppal	2115	2532	**4647**	42	149	191	2157	2681	**4838**
178	Kushtagi	1719	1829	**3548**	31	150	181	1750	1979	**3729**
179	Yelburga	1705	1813	**3518**	76	202	278	1781	2015	**3796**
Koppal		**8056**	**8836**	**16892**	**223**	**628**	**851**	**8279**	**9464**	**17743**
180	Athani	2261	2354	**4615**	**44**	**100**	144	2305	2454	**4759**
181	Chikodi	1996	2118	**4114**	**32**	**158**	190	2028	2276	**4304**
182	Gokak	1760	1789	**3549**	**13**	**99**	112	1773	1888	**3661**
183	Hukkeri	2566	2771	**5337**	**16**	**97**	113	2582	2868	**5450**
184	Kagawada	818	1002	**1820**	0	0	0	818	1002	**1820**
185	Mudalagi	2697	2792	**5489**	0	0	0	2697	2792	**5489**
186	Nippani	1660	1723	**3383**	0	0	0	1660	1723	**3383**
187	Rayabhag	2608	2621	**5229**	**20**	**42**	62	2628	2663	**5291**
Chikodi		**16366**	**17170**	**33536**	**125**	**496**	**621**	**16491**	**17666**	**34157**
188	Devadurga	1578	1826	**3404**	67	175	242	1645	2001	**3646**
189	Lingasugur	2256	2409	**4665**	46	283	329	2302	2692	**4994**
190	Manvi	2199	2198	**4397**	32	83	115	2231	2281	**4512**
191	Raichur	2764	2845	**5609**	43	122	165	2807	2967	**5774**
192	Sidhanur	2458	2237	**4695**	38	87	125	2496	2324	**4820**
Raichur		**11255**	**11515**	**22770**	**226**	**750**	**976**	**11481**	**12265**	**23746**
193	Shahapura	2170	2432	**4602**	**8**	**67**	75	2178	2499	**4677**
194	Shorapur	2341	2532	**4873**	**5**	**37**	42	2346	2569	**4915**
195	Yadgir	2270	2696	**4966**	**42**	**149**	191	2312	2845	**5157**
Yadgir		**6781**	**7660**	**14441**	**55**	**253**	**308**	**6836**	**7913**	**14749**
Grand Total		**233773**	**242685**	**476458**	**3992**	**11256**	**15248**	**237765**	**253941**	**491706**

ನಿರ್ದೇಶಕರು (ಪ್ರೌಢ ಶಿಕ್ಷಣ)

ಸಾರ್ವಜನಿಕ ಶಿಕ್ಷಣ ಇಲಾಖೆ